**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ ಉತ್ತರ ಕನ್ನಡ : ಕಾರವಾರ**

**ಸೆಷನ್ಸ್‌ಕೇಸ್ ನಂ. 17/2018**

**ದೋ.ಸಾ. :2 ಫ್ರಾ.ಸಾ. : 7**

ಸಾಕ್ಷಿಯ ಹೆಸರು : ಮಹೇಶ್‌ಶ್ರೀಧರ್ ಮೊಗೇರ್

ತಂದೆಯ ಹೆಸರು : ಶ್ರೀಧರ್ ಮೊಗೇರ್

ವಯಸ್ಸು : 29 ವರ್ಷ

ಉದ್ಯೋಗ : ಗುಮಾಸ್ತರು, ಜನತಾ ಸಹಕಾರಿ ಬ್ಯಾಂಕ್ ಶಿರಸಿ.

ವಾಸ : ಶಿರಸಿ.

**ದಿನಾಂಕಃ 27-08-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1. ನಾನು 2017 ರಲ್ಲಿ ಜನತಾ ಸಹಕಾರಿ ಬ್ಯಾಂಕ್ ಕುಮಟಾ ಶಾಖೆಯಲ್ಲಿ ಹಂಗಾಮಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೆ. ನನ್ನ ಮೂಲ ಮನೆ ಭಟ್ಕಳದ ಸೋನಾರ್ ಗ್ರಾಮದಲ್ಲಿ ಇತ್ತು. ಆ ಸಮಯದಲ್ಲಿ ಅಂದರೆ ಇಲ್ಲಿಗೆ 6-7 ವರ್ಷಗಳ ಹಿಂದೆ ಪೊಲೀಸನವರು ನಮ್ಮ ಮನೆ ಪಕ್ಕದಲ್ಲಿ ಶೆಟ್ಟರ ಮನೆಗೆ ಬಂದಿದ್ದರು ಎಂದು ತಿಳಿದು ನೋಡಲು ಹೋದೆ. ಅಲ್ಲಿ ಜನ ಸೇರಿದ್ದರು. ಪೊಲೀಸನವರು ನೀವು ಅಕ್ಕಪಕ್ಕದ ಮನೆಯವರಾ ಎಂದು ಕೇಳಿದರು. ನಾನು ಹೌದು ಎಂದು ಹೇಳಿದೆ. ಆಗ ನನ್ನ ಸಹಿ ಪಡೆದರು. ಈಗ ನಾನು ಸಹಿ ಮಾಡಿದ ದಾಖಲಾತಿಗಳನ್ನು ನೋಡಿರುತ್ತೇನೆ. ಅದರಲ್ಲಿ ನನ್ನ ರುಜು ಇದೆ. ಸದರಿ ದಾಖಲಾತಿ ಸ್ಥಳದ ಪಂಚನಾಮೆ ಹಾಗೂ ಕಚ್ಚಾ ನಕಾಶೆಯಾಗಿದ್ದು ಅದನ್ನು ಈಗಾಗಲೇ ನಿಪಿ-2 ಮತ್ತು 4 ಎಂದು ಗುರುತಿಸಲಾಗಿದೆ. ಸಾಕ್ಷಿಯ ರುಜುವನ್ನು ಕ್ರಮವಾಗಿ ನಿಪಿ-2 (ಸಿ) ಮತ್ತು 4(ಬಿ) ಎಂದು ಗುರುತಿಸಲಾಯಿತು. ಈಗ ತೋರಿಸಿದ ನಿಪಿ-3 ಛಾಯಾಚಿತ್ರದಲ್ಲಿ ನಾನು ಇದ್ದೇನೆ. ನಾನು ಸಹಿ ಮಾಡಿದಾಗಲೇ ಆ ಛಾಯಾಚಿತ್ರ ತೆಗೆದಿದ್ದಾರೆ. ಪೊಲೀಸನವರು ನನ್ನ ಸಮಕ್ಷಮ ಯಾವುದೇ ವಸ್ತು ಜಪ್ತು ಮಾಡಿದ್ದಾರಾ ಎಂದು ನನಗೆ ಗೊತ್ತಿಲ್ಲ. ಈಗ ತೋರಿಸಿದ ಮು.ಮಾ-1 ಅನ್ನು ಜಪ್ತು ಮಾಡಿದಾರಾ ಎಂದು ನನಗೆ ಗೊತ್ತಿಲ್ಲ ಆದರೆ ಅದಕ್ಕೆ ಅಂಟಿಸಿರುವ ಚೀಟಿಯಲ್ಲಿ ನನ್ನ ರುಜು ಇದೆ. ಸಾಕ್ಷಿಯ ರುಜುವನ್ನು ಮು.ಮಾ -1/1(ಎ) ಎಂದು ಗುರುತಿಸಲಾಯಿತು. ಆ ಪಂಚನಾಮೆಯಲ್ಲಿ ಏನು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಮಾನ್ಯ ಅಭಿಯೋಜಕರು ಅನುಮತಿಯನ್ನು ಕೇಳುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಗಮನಿಸಿ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಸರಕಾರಿ ಅಭಿಯೋಜಕರಿಂದ**

2. ದಿನಾಂಕಃ 02.07.2017 ರಂದು ಬೆಳಿಗ್ಗೆ 7 ರಿಂದ 8 ಗಂಟೆಯ ಅವಧಿಯಲ್ಲಿ ದೋಸಾ-8 ರವರ ಮನೆಯಲ್ಲಿ ದೋಸಾ-1 ರವರು ತೋರಿಸಿದ ಗುನ್ಹಾ ಸ್ಥಳವನ್ನು ಪರಿಶೀಲಿಸಿ ನನ್ನ ಸಮಕ್ಷಮ ನಿಪಿ-2 ರಂತೆ ಪಂಚನಾಮೆ ಹಾಗೂ ನಿಪಿ-4 ರಂತೆ ಕಚ್ಚಾ ನಕ್ಷೆಯನ್ನು ತಯಾರಿಸಿ ಸಹಿಗಳನ್ನು ಪಡೆದರು ಎಂದರೆ ಪಂಚನಾಮೆ ಮಾಡಿದಾಗ ನಾನು ಹಾಜರು ಇರಲಿಲ್ಲ. ಆ ಪಂಚನಾಮೆಯ ಕಾಲಕ್ಕೆ ದೋಸಾ-1 ರವರು ಹಾಜರುಪಡಿಸಿದ ಮು.ಮಾ -1 ನ್ನು ಪೊಲೀಸ ನವರು ಜಪ್ತು ಮಾಡಿದರು ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಇರುವ ಆರೋಪಿ ಮನೆ ನಮ್ಮ ಮನೆಯ ಪಕ್ಕದಲ್ಲಿ ಇದೆ ಎಂದರೆ ಹೌದು. ಈಗ ದೋಸಾ-8 ಕಾಲವಾಗಿದ್ದಾಳೆ ಎಂದರೆ ಹೌದು. ಆ ಕಾರಣದಿಂದ ಆರೋಪಿ ಮಾತು ಕೇಳಿ ನಾನು ಅವನಿಗೆ ತೊಂದರೆ ಆಗಬಾರದೆಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ವಕೀಲರಾದ ಶ್ರೀ ಎ.ಎ.ಎ ರವರಿಂದ**

3. ನಿಪಿ-3 ಛಾಯಾಚಿತ್ರವನ್ನು ಪಂಚನಾಮೆಯ ಕಾಲಕ್ಕೆ ತೆಗೆದಿಲ್ಲ ಎಂದರೆ ಹೌದು.

**ಮರು ವಿಚಾರಣೆಃ ಸ.ಅ. ರವರಿಂದ – ಇಲ್ಲ –**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ